ಕರ್ನಾಟಕ ವಿಧಾನಸಭೆ

ಬುಧವಾರ 7ನೇ ಆಗಸ್ಟ್ 2002ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

(i) ಮಾನ್ಯ ರಾಜ್ಯಪಾಲೆ ಶ್ರೀಮತಿ ವಿ.ಎಸ್.ರಮಾದೇವಿಯವರು ನಿವೃತ್ತರಾಗುವುದರಿಂದ ಸದನದಲ್ಲಿ ಶುಭವಿದಾಯ ಹೇಳುವ ಬಗ್ಗೆ ಹಾಗೂ ಹೊಸದಾಗಿ ರಾಜ್ಯಕ್ಕೆ ನೇಮಕಗೊಂಡಿರುವ ಮಾನ್ಯ ಶ್ರೀ ಟಿ.ಎನ್. ಚತುರ್ವೇದಿಯವರಿಗೂ ಸ್ವಾಗತಿಸುವ ವಿಶೇಷ ಪ್ರಸ್ತಾವನೆ ಮಂಡಿಸುವ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):- ಮಾನ್ಯ ಅಧ್ಯಕ್ಷರೆ, ಕರ್ನಾಟಕದ ರಾಜ್ಯಪಾಲರಾಗಿದ್ದ ಶ್ರೀಮತಿ ವಿ.ಎಸ್. ರಮಾದೇವಿಯವರು ನಮ್ಮ ರಾಜ್ಯದಿಂದ ನಿವೃತ್ತರಾಗಿದ್ದಾರೆ. ಅವರು ಕೆಲವು ವರ್ಷಗಳ ಕಾಲ ಬಹಳ ಒಳ್ಳೆಯ ಕೆಲಸ ಮಾಡಿದಂಥ ಒಬ್ಬ ರಾಜ್ಯಪಾಲರಾಗಿದ್ದಾರೆ. ಮತ್ತು ಪ್ರಥಮ ಬಾರಿಗೆ ಕನ್ನಡದಲ್ಲಿ ಭಾಷಣ ಮಾಡಿ ಐವತ್ತು ವರ್ಷಗಳ ಇತಿಹಾಸದಲ್ಲಿ ಹೊರರಾಜ್ಯದವರಾಗಿದ್ದರೂ ಸಹ ಅವರು ಕನ್ನಡದಲ್ಲಿ ರಾಜ್ಯಪಾಲರ ಭಾಷಣ ಮಾಡುವುದರ ಮೂಲಕ ಒಂದು ಸತ್ಸಂಪ್ರದಾಯವನ್ನು ಈ ಸದನದಲ್ಲಿ ಪ್ರಾರಂಭ ಮಾಡಿದಂಥ ಕೀರ್ತಿ ಶ್ರೀಮತಿ ವಿ.ಎಸ್.ರಮಾದೇವಿಯವರಿಗೆ ಸಲ್ಲುತ್ತದೆ. ಅವರು ರಾಜ್ಯಪಾಲರಾಗಿದ್ದಂಥ ಸಂದರ್ಭದಲ್ಲಿ ಎಲ್ಲಾ ಪಕ್ಷದವರನ್ನು, ಕಾಂಗ್ರೇಸ್, ಭಾರತೀಯ ಜನತಾ ಪಕ್ಷ, ಜನತಾ ದಳದವರಿರಬಹುದು, ನಮ್ಮೆಲ್ಲರನ್ನೂ ಸಹ ಬಹಳ ಪ್ರೀತಿ, ವಿಶ್ವಾಸದಿಂದ ನೋಡುವ ಒಬ್ಬ ರಾಜ್ಯಪಾಲರಾಗಿದ್ದರು. ಜೊತೆಗೆ ಅವರು ಒಬ್ಬ ಮಹಿಳೆಯಾಗಿ ಮಹಿಳೆಯರ ಮುಖಂಡತ್ವ ವಹಿಸಿಕೊಳ್ಳುವುದಲ್ಲದೆ, ಅನೇಕ ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವ ಮೂಲಕವಾಗಿ ರಾಜಭವನಕ್ಕೆ ಒಂದು ವಿಶೇಷ ಕಳೆಯನ್ನು ತಂದಂಥ ಕೀರ್ತಿ ಶ್ರೀಮತಿ ರಮಾದೇವಿಯವರಿಗೆ ಹೋಗಬೇಕಾಗುತ್ತದೆ. ಈಗ ಅವರು ರಾಜ್ಯಪಾಲರಾಗಿ ನಿವೃತ್ತರಾಗುತ್ತಿದ್ದಾರೆ. ಅವರಿಗೆ ಆರೋಗ್ಯ ಚೆನ್ನಾಗಿರುವುದರಿಂದ ಅವರನ್ನು ಮುಂದುವರೆಸಬಹುದಾಗಿತ್ತು. ಕಾರಣಾಂತರಗಳಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರ ಆ ಕೆಲಸ ಮಾಡಿಲ್ಲ. ಈಗ ರಾಜ್ಯಕ್ಕೆ ಹೊಸ ರಾಜ್ಯಪಾಲರಾಗಿ ನೇಮಕಗೊಂಡಿರುವ ಸನ್ಮಾನ್ಯ ಚತುರ್ವೇದಿಯವರು ಸಹ ಕೇಂದ್ರ ಸರ್ಕಾರದಲ್ಲಿ ಬಹಳ ದಕ್ಷ ಅಧಿಕಾರಿಯಾಗಿ, ಕೆಲಸ ನಿರ್ವಹಿಸಿದ್ದು ಪ್ರಾಮಾಣಿಕತೆ ಮತ್ತು ದಕ್ಷತೆಗೆ ಮತ್ತೊಂದು ಹೆಸರು ಅವರಾಗಿದ್ದಾರೆ. ಅಂತಹ ಒಬ್ಬ ದಕ್ಷ ಆಡಳಿತಗಾರರಾದ ಸನ್ಮಾನ್ಯ ಚತುರ್ವೇದಿಯವರು ಹಿಂದೆ ಸಿಎಜಿ ಆಗಿದ್ದಂಥ ಸಂದರ್ಭದಲ್ಲಿ ಕೊಟ್ಟಿರತಕ್ಕಂಥ ತೀರ್ಮಾನಗಳು, ವರದಿಗಳು ಈ ರಾಜ್ಯದ ಮತ್ತು ರಾಷ್ಟ್ರದ ಇತಿಹಾಸದಲ್ಲಿ ದಾಖಲಾಗಿರುವ ವರದಿಗಳೆಂದು ನಾನು ಭಾವಿಸಿದ್ದೇನೆ. ಆದ್ದರಿಂದ, ನಾನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇದೊಂದು ಸತ್ಸಂಪ್ರದಾಯವಾಗಬೇಕು. ರಾಜ್ಯಪಾಲರು ಸಂವಿಧಾನಬದ್ಧವಾಗಿ ಈ ರಾಜ್ಯದ ಮೊದಲನೇ ಸ್ಥಾನದಲ್ಲಿರುವುದರಿಂದ, ಈ ಸದನ ಸೇರಿರುವ ಸಂದರ್ಭದಲ್ಲಿ ಅವರು ನಿವೃತ್ತಿಯಾಗುತ್ತಿರುವ ನಿಮಿತ್ತ ಅವರಿಗೆ ಶುಭ ವಿದಾಯ

ಹೇಳುವ ಮುಖಾಂತರ ಅವರ ಮುಂದಿನ ಜೀವನ ಸುಖಮಯವಾಗಿರಲಿ, ಭಗವಂತ ಅವರಿಗೆ ಎಲ್ಲಾ ರೀತಿಯಲ್ಲೂ ಒಳ್ಳೆಯದನ್ನು ಮಾಡಲೆಂದು ಹಾರೈಸಬೇಕು. ಹಾಗೂ ಹೊಸ ರಾಜ್ಯಪಾಲರಾಗಿ ಬರುತ್ತಿರುವ ಸನ್ಮಾನ್ಯ ಚತುರ್ವೇದಿಯವರನ್ನು ಸ್ವಾಗತಿಸಬೇಕು. ಅಂತಹ ಒಂದು ನಿರ್ಣಯವನ್ನು ಮಾನ್ಯ ಅಧ್ಯಕ್ಷರು ಮಂಡಿಸಬೇಕೆಂದು ತಮ್ಮಲ್ಲಿ ನಾನು ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಆ ಕುರಿತ ಪ್ರಸ್ತಾವನೆಯನ್ನು ನಾನು ಮಂಡಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಸದನದಲ್ಲಿ ಇಲ್ಲ. ಏಕೆಂದರೆ, ಅವರು ಆಡಳಿತ ನಡೆಸುವ ಸರ್ಕಾರದ ಮುಖ್ಯಮಂತ್ರಿಗಳು. ಅವರ ಮೂಲಕ ಈ ಪ್ರಸ್ತಾವ ಬರಲೆಂದು ನಾನು ಹೇಳುತ್ತಿದ್ದೇನೆ. ನಾನೂ ಮಂಡಿಸುತ್ತೇನೆ. ಅವರೂ ಇರಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಈಗ ನಾನು ಸಾಮಾನ್ಯವಾಗಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕಾದ ವಿಚಾರ ಇದಾಗಿದೆ. ಆದರೆ, ಸಮಯದ ಒತ್ತಡದಿಂದಾಗಿ ತಾವು ಪ್ರಶ್ನೋತ್ತರಗಳನ್ನೂ ಸಹ.....

ಅಧ್ಯಕ್ಷರು:- ತಾವು ಈಗ ಏನು ಹೇಳಿದ್ದೀರೋ ಅದನ್ನು ಮೂವ್ ಮಾಡಿಸುವುದಕ್ಕೆ ಏರ್ಪಾಡು ಮಾಡಿಸುತ್ತೇನೆ. ನಾನಾದರೂ ಮಾಡುತ್ತೇನೆ ಅಥವಾ ಸರ್ಕಾರದ ಪರವಾಗಿ ಅವರು ಮಾಡುತ್ತಾರೆ.

ಶ್ರೀ ಬಿ.ಆರ್. ನೀಲಕಂಠಪ್ಪ:- ಸನ್ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು:- ನೀಲಕಂಠಪ್ಪನವರೆ, ಒಂದು ನಿಮಿಷ ತಡೆಯಿರಿ. ರಾಜ್ಯಪಾಲರ ಬಗ್ಗೆ ಪ್ರಸ್ತಾಪಿಸುವಾಗ ತಾವು ಡಿಸ್ಟರ್ಬ್ ಮಾಡಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಸಿಂಧ್ಯಾರವರು ಹೇಳಿರುವ ಸಲಹೆಗಳು ಸಮಯೋಚಿತವಾಗಿದೆ.

ಅಧ್ಯಕ್ಷರು:- ಆ ಕುರಿತ ಪ್ರಸ್ತಾವ ಮಂಡಿಸೋಣ. ಹೌಸ್ ಲೀಡರ್ ಇರಬೇಕು. ಅವರು ಇಲ್ಲದಿದ್ದರೆ ಅವರ ಮೇಲೆ ಲ್ಯಾಪ್ಸ್ ಆಗುತ್ತದೆ. ಲೀಡರ್ ಇಲ್ಲದೆ ಮಾಡಿದರು ಎಂದು it will be a lapse on the leader.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಮ್ಮ ಮುಖ್ಯಮಂತ್ರಿಗಳು ಸುಸಂಸ್ಕೃತ ಮುಖ್ಯಮಂತ್ರಿಗಳು. ಇಂತಹ ವಿಚಾರದಲ್ಲಿ ಅವರು ಯಾವತ್ತೂ ಸಹ ಹಿಂದೆ ಬಿದ್ದಿಲ್ಲ. ಅವರೇ ಮೊದಲಿಗರಾಗುತ್ತಾರೆ. ಸರ್ಕಾರಕ್ಕೆ ಮರೆವು ಹೇಗಿದೆ ನೋಡಿ. ವಯಸ್ಸಾದಂತೆ ಮರೆವು ಬರುತ್ತದೆ. ಅದರಿಂದಾಗಿ ನಾನು ಜ್ಞಾಪಿಸಿದೆ.

Mr. Speaker:- Thank you for your suggestion.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಬಹಳ ಒಳ್ಳೆಯ ರೀತಿಯ ಸಲಹೆ ನೀಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ತಾವೇ ಇದನ್ನು ಮಂಡಿಸಿ.

ಅಧ್ಯಕ್ಷರು:- ನಾನು ಮೂವ್ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀವಲ್ಲ ಸ್ವಾಮಿ. ಸರ್ಕಾರದವರು ಅದನ್ನು ಮಾಡಲಿ.

ಅಧ್ಯಕ್ಷರು:- ಸರ್ಕಾರದಿಂದಲೇ ಮಾಡಿಸುತ್ತೇನೆ. ಮುಖ್ಯಮಂತ್ರಿಗಳು ಇರಬೇಕು. ಮುಖ್ಯಮಂತ್ರಿಗಳು ಇಲ್ಲದೆ ನಾವು ಮಾಡುವುದು ಅಷ್ಟು ಚೆನ್ನಾಗಿರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ ತಾನೇ?

ಅಧ್ಯಕ್ಷರು:- ಹೋಗಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಸಿಂಧ್ಯಾರವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಂದ ಮೂವ್ ಮಾಡಿಸೋಣ. ಅಷ್ಟೇ ಅಲ್ಲ, ರಾಜ್ಯಪಾಲರಾಗಿ ಅವರು ಒಳ್ಳೆಯ ಕೆಲಸ ಮಾಡಿರುವುದನ್ನೂ ಸಹ ಸೇರಿಸೋಣ.

ಅಧ್ಯಕ್ಷರು:- ಇವೊತ್ತು ಸಾಯಂಕಾಲದೊಳಗಾಗಿ ಅದನ್ನು ತೆಗೆದುಕೊಳ್ಳೋಣ. ನಾನಾದರೂ ಮೂವ್ ಮಾಡುತ್ತೇನೆ. ಸರ್ಕಾರದವರೂ ಸಹ ಮೂವ್ ಮಾಡಲು ತಯಾರಿದ್ದಾರೆ. ನಾನೇ ಅದನ್ನು ಮೂವ್ ಮಾಡುತ್ತೇನೆ, ಬಿಡಿ.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈಗ ಸದನಕ್ಕೆ ಬಂದಿರುವುದರಿಂದ ಈಗಲೇ ಪ್ರಸ್ತಾಪಿಸಿ ಮುಗಿಸಿಬಿಡಬಹುದು. ಈ ಸದನದ ಸಭಾನಾಯಕರಾಗಿರುವ ಮಾನ್ಯ ಮುಖ್ಯಮಂತ್ರಿಗಳು ಒಂದು ವಂದನಾ ನಿರ್ಣಯ ಮಂಡಿಸಬೇಕು. ನಮ್ಮ ರಾಜ್ಯಕ್ಕೆ ಒಳ್ಳೆಯ ರಾಜ್ಯಪಾಲರಾಗಿ ಶ್ರೀಮತಿ ವಿ.ಎಸ್. ರಮಾದೇವಿಯವರು, ಒಬ್ಬ ಸುಸಂಸ್ಕೃತ ಮಹಿಳೆಯಾಗಿ ಬಹಳ ಉತ್ತಮವಾದ ಕೆಲಸ ಮಾಡಿ ಎಲ್ಲಾ ಪಕ್ಷದವರನ್ನು ಸಹ ಒಂದೇ ದೃಷ್ಟಿಕೋನದಿಂದ ನೋಡಿದ್ದಾರೆ. ಈ ರಾಜ್ಯದ ಸಂಸದೀಯ ವ್ಯವಹಾರಗಳ ಇತಿಹಾಸದಲ್ಲಿ ಕನ್ನಡದಲ್ಲಿ ಭಾಷಣ ಮಾಡುವ ಮೂಲಕ ಒಂದು ದಾಖಲೆ ನಿರ್ಮಾಣ ಮಾಡಿರುವ ಕೀರ್ತಿ ಶ್ರೀಮತಿ ವಿ.ಎಸ್. ರಮಾದೇವಿಯವರಿಗೆ ಹೋಗಬೇಕಾಗುತ್ತದೆ. ಅವರ ಸಂಕಷ್ಟದ ದಿನಗಳನ್ನು ಸಹ ನಾವು ನೋಡಿದೆವು. ಅವರು ತಮ್ಮ ಪತಿಯನ್ನು ಕಳೆದುಕೊಂಡ ಸಂದರ್ಭ ಕರ್ನಾಟಕದಲ್ಲಿ ಅವರು ರಾಜ್ಯಪಾಲರಾಗಿದ್ದಾಗ ನಡೆಯಿತು. ಅಂತಹ ಸಂದರ್ಭದಲ್ಲೂ ಅವರ ದುಃಖದಲ್ಲಿ ನಾವು ಸಹಭಾಗಿಗಳಾಗಿದ್ದೆವು. ಅವರು ಎಲ್ಲಾ ಸಂದರ್ಭಗಳಲ್ಲೂ ಸಮತೋಲನ ಕಳೆದುಕೊಳ್ಳದೆ ನಮ್ಮನ್ನು ಬಹಳ ಚೆನ್ನಾಗಿ ನೋಡಿಕೊಂಡರು. ನಾವು ಅನೇಕ ಸಂದರ್ಭಗಳಲ್ಲಿ ಅವರನ್ನು ಹೋಗಿ ಭೇಟಿ ಮಾಡುತ್ತಿದ್ದೇವೆ. ವಿರೋಧ ಪಕ್ಷದವರಾಗಿ ಸರ್ಕಾರ ಕೆಲವು ಸಂದರ್ಭಗಳಲ್ಲಿ ಮಾಡತಕ್ಕಂಥ ಕೆಲಸ-ಕಾರ್ಯಗಳು ಹಿಡಿಸದಿದ್ದಾಗ, ಅವರನ್ನು ಹೋಗಿ ನೋಡಿದಾಗ ಅವರು ನಮ್ಮ ಅಭಿಪ್ರಾಯಗಳನ್ನು ಬಹಳ ಚೆನ್ನಾಗಿ ಕೇಳಿ ನಮಗೆ ಸಾಂತ್ವನ ಹೇಳುವುದು ಮತ್ತು ಸರ್ಕಾರಕ್ಕೆ ನಿರ್ದೇಶನ ನೀಡುವ ಈ ತರಹದ ವಿಚಾರಗಳಲ್ಲಿ ರಾಜ್ಯಪಾಲರು ಬಹಳ ಚೆನ್ನಾಗಿ ನಡೆದುಕೊಂಡರು. ಅವರು ನಿವೃತ್ತರಾಗಿ ಹೋಗುತ್ತಿರುವ ಈ ಸಂದರ್ಭದಲ್ಲಿ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದು ಈ ಸದನದ ಕರ್ತವ್ಯವೆಂದು ತಿಳಿದು, ಒಂದು ವಂದನಾ ನಿರ್ಣಯ ಮಂಡಿಸಬೇಕೆಂದು ಮಾನ್ಯ ಸಭಾನಾಯಕರಲ್ಲಿ ವಿನಂತಿಸುತ್ತೇನೆ. ಜೊತೆಗೆ ಈಗ ರಾಜ್ಯಪಾಲರಾಗಿ ಬರುತ್ತಿರುವ ಸನ್ಮಾನ್ಯ ಚತುರ್ವೇದಿಯವರು ಈ ರಾಷ್ಟ್ರದ ಒಬ್ಬ ಸಮರ್ಥ, ದಕ್ಷ ಪ್ರಾಮಾಣಿಕ ಅಧಿಕಾರಿ. ಈಗಾಗಲೇ ಮಾನ್ಯ ಎಸ್.ಎಂ.ಕೃಷ್ಣರವರು, ರಾಜ್ಯಸಭಾ ಸದಸ್ಯರಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಚತುರ್ವೇದಿಯವರು, ನನಗೆ ಬಹಳ ಪರಿಚಿತರು, ನಾನು ಅವರ ನೇಮಕವನ್ನು ಸ್ವಾಗತಿಸುತ್ತೇನೆಂದು ಹೇಳಿರುವುದು ಬಹಳ ಒಳ್ಳೆಯ ಬೆಳವಣಿಗೆ. ಏಕೆಂದರೆ, ಇವೊತ್ತು ಏನಾಗಿದೆಯೆಂದರೆ, ನಮ್ಮ ಫೆಡರಲ್ ಸಿಸ್ಟಂನಲ್ಲಿ ಕೇಂದ್ರ ಸರ್ಕಾರದಲ್ಲಿ ಒಂದು ಪಕ್ಷ ಇರುತ್ತದೆ, ಅಥವಾ ನಾನಾ ಪಕ್ಷಗಳು ಸೇರಿಕೊಂಡು ಆಡಳಿತ ನಡೆಸಬೇಕಾಗುತ್ತದೆ. ರಾಜ್ಯಗಳಲ್ಲಿ ನಾನಾ

ಪಕ್ಷಗಳು ಆಡಳಿತ ನಡೆಸುತ್ತವೆ. ಇಂತಹ ಒಂದು ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ಆಡಳಿತ ಪಕ್ಷ ಒಂದು ರಾಜ್ಯ ಆಳುವಾಗ ರಾಜ್ಯಪಾಲರನ್ನು ಯಾರು ನೇಮಕ ಮಾಡುತ್ತಾರೆ, ಬೇರೆ ಪಕ್ಷ ಕೇಂದ್ರದಲ್ಲಿ ಆಳುವಾಗ ಈ ರಾಜ್ಯಪಾಲರು ಅಥವಾ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಸಂವಿಧಾನದ ಮುಖ್ಯಸ್ಥರಾಗಿದ್ದು, ಇವರ ಮತ್ತು ಮುಖ್ಯಮಂತ್ರಿಗಳ ಸಂಬಂಧ ಏನಿದೆ, ಇದು ಬಹಳ ಮಧುರವಾಗಿರುವ ಅವಶ್ಯಕತೆ ಬಹಳ ಇದೆ. ಇಂತಹ ಸನ್ನಿವೇಶದಲ್ಲಿ ಇವೊತ್ತು ಮಾನ್ಯ ಚತುರ್ವೇದಿಯವರನ್ನು ನೇಮಕ ಮಾಡಿರುವುದನ್ನು ಈ ಸದನ ಸ್ವಾಗತಿಸಬೇಕಾಗುತ್ತದೆ. ಈ ಎರಡು ವಿಷಯಗಳಲ್ಲಿ ಅವರು ಧನಿಗೂಡಿಸುತ್ತಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಾವು ಈ ಸದನದಲ್ಲಿ ರಾಜ್ಯಪಾಲರನ್ನು ವಿಶೇಷವಾಗಿ ಅಭಿನಂದಿಸುತ್ತೀರೆಂದು ನಂಬಿ ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ನಿಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು:- ನಾನು ಏನು ಹೇಳಿದೆನೆಂದರೆ, ಮುಖ್ಯಮಂತ್ರಿಗಳು ಬರಲಿ. ಏಕೆಂದರೆ, ಅವರು ಸ್ಟೇಟ್ ಚೀಫ್ ಮಿನಿಸ್ಟರ್ ಆಗಿದ್ದಾರೆ, ಅವರು ಮೂವ್ ಮಾಡಿದರೆ ಉತ್ತಮವೆಂದು ನಾನು ಹೇಳಿದ್ದು. ತಾವು ಈಗಲೇ ಮೂವ್ ಮಾಡುತ್ತೀರೋ ಅಥವಾ ಇನ್ನು ಸ್ವಲ್ಪ ಸಮಯವಾದ ನಂತರ ಮೂವ್ ಮಾಡೋಣವೆ? ಹೇಗೆ? ಮಧ್ಯಾಹ್ನ ಅಥವಾ ನಾಳೆ ಮೂವ್ ಮಾಡೋಣ. ಆಯಿತು.

ಶ್ರೀ ಬಿ.ಆರ್. ನೀಲಕಂಠಪ್ಪ:- ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ನಾನು ಬಿಲ್ ಮೂವ್ ಮಾಡುತ್ತಿಲ್ಲ. ಒಂದು ಪ್ರಕಟಣೆ ಇದೆ. ಒಂದು ನಿಮಿಷ. You please oblige me.

(ಈ ಹಂತದಲ್ಲಿ ಆಡಳಿತ ಪಕ್ಷದ ಹಲವು ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:- ಒಂದು ಪ್ರಕಟಣೆ ಇದೆ. ಅದನ್ನು ಓದಿಬಿಡುತ್ತೇನೆ. ವಿಧಾನಪರಿಷತ್ತಿನಿಂದ ಅಂಗೀಕಾರಗೊಂಡು ಬಂದಿರುವ ಬಿಲ್ ಅನ್ನು ಇಲ್ಲಿ ಓದಿ ಹೇಳುವುದಷ್ಟೆ. ಅದನ್ನು ಹೇಳದಿದ್ದರೆ ಲ್ಯಾಪ್ಸ್ ಆಗುತ್ತದೆ: It will be a lapse on my part. You please hear me. I am not taking up any bill.

2. ಪ್ರಕಟಣೆ

ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತವೆ:-

ಎ) "ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 103ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 5ನೇ ಆಗಸ್ಟ್ 2002ರಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ, 2002, ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆಯೆಂದು ತಿಳಿಸಿ, ಸದರಿ ವಿಧೇಯಕಕ್ಕೆ ವಿಧಾನಸಭೆಯ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಬಿ) "ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 5ನೇ ಆಗಸ್ಟ್ 2002ರಂದು ಈ ಕೆಳಗೆ ನಮೂದಿಸಿರುವ ವಿಧೇಯಕಗಳನ್ನು ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆಯೆಂದು ತಿಳಿಯಪಡಿಸಿರುತ್ತಾರೆ.

೧. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2002.

೨. 2002ನೇ ಸಾಲಿನ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) (ಕರ್ನಾಟಕ ತಿದ್ದುಪಡಿ) ವಿಧೇಯಕ.

ಇಷ್ಟು ಮಾತ್ರ ಓದಲಿಕ್ಕೆ ತಾವು ಏಕೆ ಅಡ್ಡಿ ಮಾಡಿದಿರಿ? ನಾನು ಇದನ್ನು ಇಲ್ಲಿ ಓದಿರದಿದ್ದರೆ it was a lapse on my part.

(ಗೊಂದಲ)

ಅಧ್ಯಕ್ಷರು:- ಯಾರಾದರೂ ಒಬ್ಬರು ಮಾತನಾಡಿ.

(ಗೊಂದಲ)

ಅಧ್ಯಕ್ಷರು- ಎಲ್ಲರೂ ಒಟ್ಟಿಗೇ ಮಾತನಾಡಿದರೆ, ಇಲ್ಲಿ ಬರೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಯಾರಾದರೂ ಒಬ್ಬರು ಮಾತನಾಡಿ. ಮಾನ್ಯ ಗುರುಸ್ವಾಮಿ ಅಥವಾ ಮಾನ್ಯ ನೀಲಕಂಠಪ್ಪ ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಮಾತನಾಡಿ. ಎಲ್ಲರೂ ಎಲ್ಲಿ ಮಾತನಾಡುವುದಕ್ಕಾಗುತ್ತದೆ?

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ನಾನು ಹೇಳುವುದನ್ನು ಕೇಳಿ. ನೋಟೀಸ್‌ಗೆ ಸಿಗ್ನೇಚರ್ ಹಾಕಿರುವವರ ಪೈಕಿ ಮಾನ್ಯ ನೀಲಕಂಠಪ್ಪನವರು, ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಗುರುಸ್ವಾಮಿಯವರು ಇದ್ದಾರೆ. ಮೂವರಲ್ಲಿ ಯಾರಾದರೂ ಒಬ್ಬರು ಮಾತನಾಡಿ. ಮಾನ್ಯ ನೀಲಕಂಠಪ್ಪನವರೇ, ಮೊದಲಿಗೆ ತಾವೇ ಮಾತನಾಡಿ. I have allowed Mr. Neelakantappa to speak. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಯಾರು ಸೈನ್ ಹಾಕಿದ್ದಾರೋ ಅವರಿಗೆಲ್ಲಾ ಅವಕಾಶ ಮಾಡಿಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಯಾರಾದರೂ ಒಬ್ಬರು ಮಾತನಾಡಿ, ಎಲ್ಲರೂ ಏಕೆ ನಿಂತುಕೊಳ್ಳುತ್ತೀರಿ?

3. ನಿಯಮ 69ರ ಮೇರೆಗೆ:-

ಅ) ಕೇಂದ್ರ ಸರ್ಕಾರವು, ಕೇಂದ್ರ ಮತ್ತು ಬಿ.ಜೆ.ಪಿ. ನಾಯಕರುಗಳಿಗೆ ಪೆಟ್ರೋಲ್ ಬಂಕ್, ಅಡಿಗೆ ಅನಿಲ ಮತ್ತು ಸೀಮೆಎಣ್ಣೆ ಇತ್ಯಾದಿಗಳ ವಿತರಣೆಗೆ ಲೈಸೆನ್ಸ್ ಮಂಜೂರಾಗಿರುವುದರ ಬಗ್ಗೆ.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ):- ಮಾನ್ಯ ಅಧ್ಯಕ್ಷರೆ, ಇಡೀ ರಾಷ್ಟ್ರದಲ್ಲಿ ತಲ್ಲಣಗೊಳಿಸುವಂತಹ ಸಾವಿರಾರು ಕೋಟ್ಯಾಂತರ ರೂಪಾಯಿಗಳ ಬಹು ಕೋಟಿ ಹಗರಣವನ್ನು ಬಿ.ಜೆ.ಪಿ. ನಾಯಕರುಗಳು, ಭಜರಂಗ ದಳದ ಕಾರ್ಯಕರ್ತರು ಮತ್ತು ಆರ್.ಎಸ್.ಎಸ್. ಕಾರ್ಯಕರ್ತರು ಮತ್ತು ಅವರ ಬೆಂಬಲಿಗರು ಈ ದೇಶದ ಹಣವನ್ನು ಲೂಟಿ ಹೊಡೆಯುವಂತಹ ಕೆಲಸವನ್ನು .....

(ಗೊಂದಲ)

ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಯಾವ ಪ್ರಾವಿಷನ್ ಅಡಿಯಲ್ಲಿ ಯಾವ ವಿಷಯದ ಮೇಲೆ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ?....

(ಗೊಂದಲ)

ಅಧ್ಯಕ್ಷರು:- ಅವರು ಹೇಳುವವರೆಗೂ ಕೇಳಿ. ನಿಯಮ 69 ಮೂಲಕ ಅವರು ಪ್ರಸ್ತಾಪಿಸುತ್ತಿದ್ದಾರೆ.